ತಲೆಯಿಂದ ಕೆಳಗಿಳಿಯುತ್ತಿದ್ದ ಕೈಗಳಲ್ಲಿ ಮಿಂಚುತ್ತಿದ್ದ ಚಿನ್ನದ ಬಳೆಗಳತ್ತ.

"ನಾನಜ್ಜಿ ಕರಿಯಕ್ಕ."

"ಹೋ... ಮೀನು ಮಾರುವ ಕರಿಯಕ್ಕ... ನೀನನಾ... ಗುರ್ತ ಸಿಗಲಿಲ್ಲ ನೋಡು" ಅವಳನ್ನು ಸೋಜಿಗದಿಂದ ನೋಡಿತು ಅಜ್ಜಿ.

ಅಜ್ಜಿ ತನ್ನನ್ನು ಮೀನು ಮಾರುವವಳು ಎಂದು ಕರೆದದ್ದು ಇಷ್ಟ ಆಗದೆ, ಸ್ವಲ್ಪ ಸಿಡುಕಿನಿಂದಲೇ, "ನಾವೀಗ ದೇವರ ಕೆಲಸ ಮಾಡುವವರು, ಜನ ಎಷ್ಟು ಮರ್ಯಾದೆ ಕೊಡ್ತಾರೆ ಗೊತ್ತ ನಮಗೆ" ಎಂದಳು.

ಅವಳ ಧ್ವನಿಯಲ್ಲಿದ್ದ ದರ್ಪ, ಉಡುಗೆ ತೊಡುಗೆಯಲ್ಲಿದ್ದ ದೌಲತ್ತು ನೋಡಿ ಒಳಗೆ ಕರೆಯುವುದಾ, ಇಲ್ಲ ಮೊದಲಿನ ಹಾಗೆ ಅಂಗಳದಲ್ಲೇ ಕೂರಿಸುವುದಾ ಎಂದು ಗೊಂದಲವಾಯಿತು ಅಜ್ಜಿಗೆ.

ತಾನು ರೇಗಿದರೂ ಅಜ್ಜಿ ಸುಮ್ಮನೆ ನಿಂತಿರುವುದನ್ನು ನೋಡಿ ಕರಿಯಕ್ಕನಿಗೆ ಸಿಟ್ಟು ಬಂತು. ಈ ಅಜ್ಜಿ ಒಂದು ಕಾಲದಲ್ಲಿ ತನ್ನ ಪಟ್ಟಾಂಗದ ಒಡನಾಡಿ ಎಂಬುದನ್ನು ಮರೆತು, ಅಜ್ಜಿಯನ್ನು ಅಲಕ್ಷಿಸಿ, "ಸರೋಜಕ್ಕ, ನಿರ್ಮಲಕ್ಕ ಇದ್ದೀರ ಒಳಗೆ" ಎನ್ನುತ್ತಾ ಸೀದಾ ಮನೆಯೊಳಗೆ ಹೊಕ್ಕಳು.

ಅದೇ ಸಮಯಕ್ಕೆ ಬೈಕಿನಲ್ಲಿ ವೇಗವಾಗಿ ಬಂದ ಅಜ್ಜಿಯ ದೊಡ್ಡ ಮಗ ರಾಮಣ್ಣ, ಅಂಗಳದಲ್ಲಿ ಗಕ್ಕನೆ ಬ್ರೇಕು ಹಾಕಿದ. ಅವಸರದಿಂದ ಬೈಕಿಳಿದವನ ಕೈಯಲ್ಲಿ ಬೇಕರಿಯ ಬೆಣ್ಣೆ ಬಿಸ್ಕತ್ತು ಕಂಡು ಅಜ್ಜಿ ಹುಬ್ಬೇರಿಸಿತು.

"ಕೃಷ್ಣಪ್ಪಣ್ಣನ ಮನೆಗೆ ದರ್ಶನಕ್ಕೆ ಬಂದಿದ್ದರು ತಾಯಿ, ಮಗಳು. ನಾನೇ ಬನ್ನಿ ಅಂತ ಕರೆದೆ. ನಾಗಕ್ಕ ಆಮೇಲೆ ಬರುತ್ತಾಳಂತೆ. ಇದೇ ಕಾರು ಹೋಗಿ ಕರ್ಕೊಂಡು ಬರ್ತದೆ. ನಾವೇ ಹೋಗಿ ದಿನ ನಿಗದಿ ಮಾಡಿ ಕರೆಸಿದ್ರೆ, ಅಡ್ವಾನ್ಸ್, ಕಾರು ಬಾಡಿಗೆ ಅಂತ ದುಡ್ಡು ಜಾಸ್ತಿ ಆಗ್ತದೆ. ಅದಕ್ಕೆ ಇಲ್ಲೇ ಹೇಗೂ ಸಿಕ್ಕಿದ್ರಲ್ಲ, ಪುಸಲಾಯಿಸಿ ಕರೆದುಕೊಂಡು ಬಂದೆ. ಆರು ತಿಂಗಳಿಂದ ವ್ಯವಹಾರ ತುಂಬ ಕಮ್ಮಿ ಉಂಟಲ್ಲ, ಇವರ ಹತ್ತಿರ ಪರಿಹಾರ ಕೇಳುವ ಅಂತ."

ಮಗ ಜಾಣತನದ ಕೆಲಸ ಮಾಡಿದ ಎಂದು ಅಜ್ಜಿಗೆ ಖುಷಿಯಾದರೂ ಕರಿಯಕ್ಕನ ಉಪಚಾರಕ್ಕೆ ಬೆಣ್ಣೆ ಬಿಸ್ಕತ್ತಿಗೆ ದುಡ್ಡು ಹಾಕಿದ್ದು ಪಿಚ್ಚೆನಿಸಿತು. 'ನನ್ನ ಕೇಳದೆ ಭಾರಿ ದರಬಾರು ಶುರು ಮಾಡ್ಕೊಂಡಿದಾರೆ, ಇರಲಿ ಆಮೇಲೆ ವಿಚಾರಿಸಿಕೊಂಡರಾಯಿತು' ಎಂದು ಸುಮ್ಮನಾಯಿತು ಅಜ್ಜಿ.

ಅವತ್ತು ಸಂಜೆ ಬಂದ ನಾಗಕ್ಕನನ್ನು ನೋಡಿ, ಮನೆಯ ಹಿರಿಯರಿರಲಿ, ಮಕ್ಕಳಿಗೂ ಅಚ್ಚರಿ! "ಅರೇ, ಸಿನಿಮಾ ನಟಿಯಂತೆ ಇರುವ ಇವಳು ಕರಿಯಕ್ಕನ ಮಗಳಾ?" ಎಂದು ಎಲ್ಲರೂ ಹುಬ್ಬೇರಿಸಿದರು.

ನಾಗಕ್ಕ ಎಲ್ಲರೊಡನೆ ಆತ್ಮೀಯವಾಗಿ ಬೆರೆತಳು. ಹೆಂಗಸರೊಡನೆ ಹರಟಿದಳು, ಮಕ್ಕಳನ್ನು ಮುದ್ದಿಸಿದಳು. 'ಕರಿಯಕ್ಕನ ಮಗಳಾದರೇನು, ದೇವರ ಅನುಗ್ರಹ ಇರುವುದರಿಂದಲೇ ಇಷ್ಟು ಸಭ್ಯ ನಡವಳಿಕೆ ರೂಢಿಯಾಗಿದೆ' ಎಂದು ಅಜ್ಜಮ್ಮ ಮೆಚ್ಚಿಕೊಂಡಿತು. ಮಾರನೆಯ ದಿನ ಬೆಳಗ್ಗೆಯೇ ದರ್ಶನ ನಡೆಸುವುದೆಂದು ನಿಗದಿಯಾಯಿತು.

ಕರಿಯಕ್ಕನನ್ನು ನಾಗಕ್ಕ ಒಂದು ಮೂಲೆಗೆ ಕರೆದುಕೊಂಡು ಹೋಗಿ, "ನನಗಿವತ್ತು ಸುಸ್ತಾಗಿದೆ ಅಮ್ಮಾ, ನಾಳೆ ಬೆಳಗ್ಗೆಯೇ ಪೂಜೆ ಇರುವುದರಿಂದ ಈಗ ಹೋಗಿ ಬೆಳಗ್ಗೆ ಅಲ್ಲಿಂದ ಬರುವುದು ರಗಳೆ. ನಾನಿವತ್ತು ಇಲ್ಲಿಯೇ ಉಳಿದುಕೊಳ್ಳುತ್ತೇನೆ. ಕೃಷ್ಣಪ್ಪಣ್ಣನವರ ಮನೆಯಲ್ಲಿ ಕೊಟ್ಟ ದಕ್ಷಿಣೆ ದುಡ್ಡು, ಫಲ, ವಸ್ತ್ರ ಕಾಣಿಕೆಗಳನ್ನ ಇಲ್ಲಿಟ್ಟುಕೊಳ್ಳುವುದು ಸರಿಯಲ್ಲ, ನೀನು ಅದೆಲ್ಲಾ ತಗೊಂಡು ಮನೆಗೆ ಹೋಗು, ಬೆಳಗ್ಗೆ ಬಾ" ಎಂದಳು.

ದೇವರ ಕೆಲಸ ಆರಂಭಿಸಿದಾಗಿನಿಂದ ಸಿಗುತ್ತಿರುವ ದುಡ್ಡು, ಜನರು ಕೊಡುತ್ತಿರುವ ಗೌರವಕ್ಕೆ ಉಬ್ಬಿ, ಗತ್ತಿನಲ್ಲಿ ಬೀಗುವ ಮಗಳು ಈ ಮನೆಗೆ ಬರಲು ಸಲೀಸಾಗಿ ಒಪ್ಪಿಕೊಂಡಿದ್ದು, ಮನೆಯವರೊಡನೆ